12 Writ Petition Filed by some Students Studying B. S. Communication of Bangalore University

SRI MALLARI GOWDA S. PATIL.—A dozen of B. S. Communication stu ents of Bangalore University of April 1983 batch had approached the High Court since they were mad: to fail in the Examination. The High Court directed the University to have the papers revalued. By this revaluation all the students have passed. Earlier the stud:nts had requested the Senate to have revaluation. In turn the senate had constituted a sub-committee and the Committee recommended t. revalue the papers valued by Shri Puttaraju, Reader in the Department of Communication, Bangalore Univ:rsity, who is responsible for this unhappy affair of approacting the High Court. The Committee had also recommended to hold a detailed enquiry int'o the conduct of behaviour of Shri Puttaraju in view of the seriousness of the allegation and that he should not be appointed as an examiner till the enquiry is completed and he should be transferred to any other Univ:rsity. But the University did not initiate any action against him and he continued to harass the students in the open class and also started black mailing activities against the students. Thus he had done an irrepairable damage to the University as well as spoiled the reputation of the Department.

ಶ್ರೀ ಎಂ. ರಘುಪತಿ(ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಇಷ್ಟೇ ಹೇಳುತ್ತೇನೆ. ಏಕೆಂದರೆ, ವಿಶ್ವವಿದ್ಯಾನಿಲಯಗಳು ಸ್ವಾಯುತ್ತ ಸಂಸ್ಥೆಗಳು. ಇವು ಸ್ವಾಯುತ್ತ ಸಂಸ್ಥೆಗಳಾಗಿರುವುದರಿಂದ ಸರ್ಕಾರದ ಇತಿಮಿತಿ ಬಹಳ ಇದೆ. ಸರ್ಕಾರ ನೇರವಾಗಿ ಪ್ರವೇಶ ಮಾಡುವುದಕ್ಕೆ ಅವಕಾಶವಿಲ್ಲ. ಆದರೂ ಈ ವಿಷಯದ ಬಗ್ಗೆ ಉಪಕುಲಪತಿಗಳಿಗೆ ಮತ್ತು ಕುಲಪತಿಗಳಿಬ್ಬರಿಗೂ ಪತ್ರಗಳನ್ನು ಬರೆದು ಈ ಮೂಲಕ ತಾವು ಏನು ಅಭಿಪ್ರಾಯವನ್ನು ವ್ಯಕ್ತಮಾಡಿದ್ದಿರೋ ಆ ಅಭಿಪ್ರಾಯವನ್ನು ಅವರಿಗೆ ತಿಳಿಸಿ ಇದನ್ನು ಸರಿಮಾಡಿ ಎಂದು ಕೇಳಿಕೊಳ್ಳುತ್ತೇನೆ.

೧೩. ಕುಂದಾಪುರ ತಾಲ್ಲೂಕಿನ ಅನಗಳ್ಳಿ ಗ್ರಾಮದಲ್ಲಿ ಉಪ್ಪು ನೀರನ್ನು ತಡೆಯಲು ಅಣೆಕಟ್ಟು ರಚನೆಯ ಬಗ್ಗೆ

ಶ್ರೀ ಪ್ರತಾಪಚಂದ್ರ ಶೆಟ್ಟಿ(ಕುಂದಾಪುರ),—ಮಾನ್ಯ ಅಧ್ಯಕ್ಷರೆ, ಕುಂದಾಪುರ ತಾಲ್ಲೂಕಿನ ಅನಗಳ್ಳಿ ಗ್ರಾಮದಲ್ಲಿ ೨ ವರ್ಷದ ಹಿಂದೆ ೫೫೪ ಎಕರೆಯ ಜಮೀನಿಗೆ ಸಿಹಿ ನೀರಿನ ಉಪಯೋಗಕ್ಕೋಸ್ಕರ ಸಾಧಾರಣ ೭ ಲಕ್ಷ ರೂಪಾಯಿಯ ಅಂದಾಜಿನಲ್ಲಿ ಉಪ್ಪು ನೀರನ್ನು ತಡೆಗಟ್ಟುವ ಅಣೆಕಟ್ಟನ್ನು ಕಟ್ಟಲಾಯಿತು. ಆದರೆ ಈಗ ಸಿಹಿ ನೀರು ಬಿಟ್ಟು ಉಪ್ಪು ನೀರೂ ಸಹ ದೊರಕದಂತಹ ಪರಿಸ್ಥಿತಿ ಒದಗಿಸಿದೆ ಕಾರಣ ಕಟ್ಟಿದಂತಹ ಅಣೆಕಟ್ಟಿನಲ್ಲಿ ಈಗಲೂ ನೀರು ಸೋರುತ್ತಾ ಇದೆ. ಮತ್ತು ಮಳೆಗಾಲದ ನಂತರ ಅಣೆಕಟ್ಟಿಗೆ ಸರಿಯಾದ ಹೊತ್ತಿಗೆ ಹಲಗೆಯನ್ನೂ ಸಹ ಹಾಕುವುದಿಲ್ಲ. ಆದ್ದರಿಂದ ಸರಕಾರದವರು ಶೀಘ್ರ ಗಮನಹರಿಸಿ ಉಪ್ಪು ನೀರು ತಡೆಗಟ್ಟುವಂತಹ ಅಣೆಕಟ್ಟು ಸೋರುತ್ತಿರುವುದನ್ನು ನಿಲ್ಲಿಸಿ ಜನರಿಗೆ ಆದರ ಸಂಪೂರ್ಣ ಪ್ರಯೋಜನ ಪಡೆಯುವಂತಾಗಲೂ ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿ).—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಪ್ರತಾಪಚಂದ್ರಶೆಟ್ಟರು ಹೇಳಿರತಕ್ಕ ವಿಷಯದ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ಕೊಡುತ್ತೇನೆ.